ಎ.ಎಸ್. ಸ್ವಾಮಿ, ಶೋರಾಪೂರ
*ಪ್ರಜ್ಞಾವಂತ ಮತದಾರ ಎಂದರೆ ಹೇಗಿರುತ್ತಾನೆ?*




ಭಟ್ಟಿ ಸಾರಾಯಿ ಕುಡಿಸಿದರೂ ಟೈಟ್ ಆಗದೆ ಮತಗಟ್ಟೆಗೆ ಬರುವಂತಿರುತ್ತಾನೆ!

ಪಿ.ಎನ್.ಶ್ರೀವತ್ಸ, ಬೆಂಗಳೂರು
*ಎನ್‌ಕೌಂಟರ್; ಇದರ ನಿಜವಾದ ಅರ್ಥ...?*
ಎ, ಬಿ, ಸಿ, ಡಿ ಎಂದು ಲೆಕ್ಕ ಹಾಕಿಕೊಂಡು ಹೋದಾಗ ಸಿಗುವ 14ನೆಯ ಕೌಂಟರ್!

ಸಾರಂಗ್, ಬೆಂಗಳೂರು
*ಸ್ನಾನಕ್ಕೆ ಹಿಂದೆ, ಊಟಕ್ಕೆ ಮುಂದೆ ಇರಬೇಕಂತೆ. ಕೆಲಸಕ್ಕೆ ಮತ್ತು ನಿದ್ದೆಗೆ?*
ಕೆಲಸಕ್ಕೆ ರಜೆ, ನಿದ್ದೆಗೆ ಮುದ್ದೆ ಇರಬೇಕಂತೆ!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ಉಪ್ಪುನೀರು ಪಡೆದ ಮೋಡಗಳು ಸಿಹಿನೀರು ಕೊಡುತ್ತವೆ. ಪವಿತ್ರವಾದ ಮತಗಳನ್ನು ಪಡೆದ ರಾಜಕಾರಣಿ...?*
ಆ ಮೋಡಗಳಿಗೆ ಉಪ್ಪು ನೀರನ್ನು ಒದಗಿಸಲು ನಮಗೆ ಬೆವರು, ಕಣ್ಣೀರು ತರಿಸುತ್ತಾನೆ!

ಲ್ಯಾಂಡ್‌ಬ್ಯಾಂಕ್ ಡಿ. ಚಂದ್ರಕುಮಾರ್, ಬೆಂಗಳೂರು
*ಹಾಸ್ಯಕ್ಕೂ, ಅಪಹಾಸ್ಯಕ್ಕೂ ಇರುವ ವ್ಯತ್ಯಾಸ...?*



ತುಟಿ ಬಿರಿದರೆ ಹಾಸ್ಯ, ತುಟಿ ಮೀರಿದರೆ ಅಪಹಾಸ್ಯ!

ಎ.ಪಿ. ರೇಣುಕಾ, ತರೀಕೆರೆ
*ಕಾಸ್ಟಿಟ್ಯು ಜಾಸ್ತಿ ಆಗುತ್ತಿದೆ. ಹೋಮದ ಅವಶ್ಯಕತೆ ಇದೆಯೆ?*
ಆಚೆ ಗಾಳಿ ಬಹಳ ಇದೆ, ವಾಹನದ ಚಕ್ರದ ಟ್ಯೂಬ್‌ನಲ್ಲಿಯೂ ಗಾಳಿ ಬೇಕೆ?

ಬಿ.ಎಸ್. ನಾರಾಯಣಸ್ವಾಮಿ, ಬೋಧನಹೊಸಹಳ್ಳಿ
*ಮನದರಸಿ ಮನೆಯೊಳಗೆ ಬಂದುಬಿಟ್ಟಿದ್ದಾಳೆ. ಅವಳನ್ನು ಹೆಂಡತಿಗೆ ಪರಿಚಯಿಸುವುದು ಹೇಗೆ?*
ಅಗತ್ಯವಿಲ್ಲ. ಮುಂಗುಸಿಗೆ ಹಾವಿನ ಚರ್ಯೆ, ಚಹರೆ ಚಿರಪರಿಚಿತ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಮಾನವನ ದೇಹದ ಅಂಗಾಂಗಗಳಲ್ಲಿ ಅವನ ನಿಜವಾದ ಶತ್ರು ಯಾವುದು?*
ಕಣ್ಣು! ಅದು ನೋಡಿದ್ದನ್ನೇ ಇತರ ಅಂಗಗಳು ಬಯಸುವುದು!

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್
*ವಿಧಾನಸೌಧವನ್ನು ಕಲ್ಲಿನಿಂದ ಕಟ್ಟಿರುವುದರಿಂದ ಕೆಲವು ರಾಜಕಾರಣಿಗಳ ಹೃದಯ ಕಲ್ಲಾಗಿದೆಯಾ?*
ನಿಜ. ಹಾಗೆಯೇ ಅದನ್ನು ಕಟ್ಟಿದವರು ಜೈಲಿನಲ್ಲಿದ್ದವರೇ ಆದ್ದರಿಂದ ಇವರದೂ ಅದೇ ಬುದ್ಧಿ!

ಗೀತಾ ಬರ್ಲ, ಬೆಂಗಳೂರು
*ಸಿನಿಮಾಗಳಲ್ಲಿ ನಾಯಕ ಮೈತುಂಬಾ ಬಟ್ಟೆ ಧರಿಸಿ ಕುಣಿದಾಡಿದರೆ ನಾಯಕಿ ತುಂಡುಬಟ್ಟೆಯಲ್ಲಿಯೇ ನಲಿಯುತ್ತಾಳಲ್ಲಾ...?*
ನಾಯಕಿಯದು ಇಷ್ಟರಲ್ಲೇ ತೃಪ್ತಿ ಪಡುವ ಗುಣವಂತೆ!

ಎಂ.ಜಿ. ಶಿವರಾಂ, ಬೆಂಗಳೂರು
*ಕಾಂಗ್ರೆಸ್, ಜೆಡಿಎಸ್, ಭಾಜಪಗಳು ಒಂದಾಗಿ ಜನಗಳಿಗೆ ಮೂಲಭೂತ ಸೌಕರ್ಯ ಒದಗಿಸಿಕೊಡುವುದು ಯಾವಾಗ?*
ಮನೆಗೆ ತೆರಳಿ, ಗಸಗಸೆ ಪಾಯಸ ಕುಡಿದು, ಫ್ಯಾನ್ ಹಾಕಿಕೊಂಡು ಮಲಗಿ; ಬೀಳುವ ಕನಸಿನಲ್ಲಿ ಇದು ನೆರವೇರಿದರೂ ಏರಬಹುದು!

ಸಂತೇಬೆನ್ನೂರು ಫೈಜ್ನಟ್ರಾಜ್, ಸಂತೆಬೆನ್ನೂರು
*ನಾಯಿಯ ನಿಯತ್ತು, ಕಾಗೆಯ ಗುಣ, ಕೋಳಿಯ ಸಹಕಾರ ಮಾನವನಿಗೆ ಬರುವುದು ಯಾವಾಗ?*
ಮುಂದಿನ ಜನ್ಮಗಳಲ್ಲಿ ಅವನು ಕ್ರಮೇಣ ಅದೆಲ್ಲಾ ಆದಾಗ!

ವಿ.ಆರ್. ಮಾಳೀಕೊಪ್ಪಮಠ, ಗದಗ
*ಎಲೆಕ್ಷನ್ನುಗಳಲ್ಲಿ ದುಡ್ಡನ್ನು ಖರ್ಚು ಮಾಡದೆ ಚುನಾಯಿತರಾಗಬಹುದೆ?*
ಹೈಕ್ಲಾಸ್ ಖದೀಮನಾಗಿದ್ದರೆ ಸ್ವಂತ ದುಡ್ಡನ್ನು ಖರ್ಚು ಮಾಡದೆ ಆಗಬಹುದು.

## ಬಹುಮಾನಿತ ಪ್ರಶ್ನೆ

ವಿ. ಹಮೀದ್, ವಿಟ್ಲ
*ಹೆಂಡತಿಯನ್ನು ಅಂಕುಶದಲ್ಲಿಟ್ಟುಕೊಳ್ಳಲು ಗಂಡನಾದವನು ಏನು ಮಾಡಬೇಕು?*
ಅಂಕುಶದಲ್ಲೇ ಇಟ್ಟುಕೊಳ್ಳಬೇಕು ಎಂದಿದ್ದರೆ ಆನೆಯಂತಹವಳನ್ನೇ ಮದುವೆಯಾಗಬೇಕು!

ರತ್ನಾ ಅಶೋಕ, ಗೊರವರ
*ದನಕ್ಕೆ ಮೂಗುದಾರ, ಹೆಣ್ಣಿಗೆ ತಾಳಿ, ಪೈರಿಗೆ ಬೇಲಿ, ಗಂಡಿಗೆ...?*
ಚಂಡಿ!

ಎಸ್.ಎ. ಮೋಹನರಾಜು, ಶಿವಮೊಗ್ಗ
*ದುಂದುಗಾರಿಕೆ ಬಡತನಕ್ಕೆ ಮೂಲ; ಜಂಬಗಾರಿಕೆ?*
ಭಂಡತನಕ್ಕೆ!

ಮಹಾಲಿಂಗ ಎಂ.ಗೋರಬಾಳ, ಮಾಣಿಕವಾಡಿ
*ಕೊಲೆ, ದುರಂತ, ಅಪಘಾತ, ಆತ್ಮಹತ್ಯೆ, ಇವುಗಳಿಗೆ ಒಂದೇ ಉತ್ತರ?*



ಉತ್ತರಕ್ರಿಯೆ!

ಹೆಚ್.ಆರ್. ದೇಸಾಯಿ, ರಾಯಚೂರು
*ಪವಿತ್ರವಾದ ಆತ್ಮ ತಾನು ವಾಸಿಸಲು ಮನುಷ್ಯನ ಈ ಗಲೀಜು ಶರೀರವನ್ನೇ ಏಕೆ ಆರಿಸಿಕೊಂಡಿದೆ?*
ಅದರದು ಟ್ರಾನ್ಸ್‌ಫರಬಲ್ ಜಾಬ್ ಆದ್ದರಿಂದ ಬಾಡಿ–ಗೆ ಮನೆಯಲ್ಲೇ ಉಳಿಯಬೇಕು. ಬಾಡಿಗೆ ಮನೆ ಇರುವುದೇ ಗಲೀಜು!

ಕಾಳೀಹುಂಡಿ ಶಿವಕುಮಾರ್, ಮೈಸೂರು
*ವಿಜ್ಞಾನಿಗಳಿಗೆ ಎರಡು ತಲೆ ಇದ್ದರೆ ಹೇಗಿರುತ್ತಿತ್ತು?*
ಎರಡೆರಡು ಬಾರಿ ತಲೆ ಹೋಗುವಂತಹ ಪ್ರಯೋಗಗಳನ್ನು ಮಾಡಬಹುದಿತ್ತು!

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಯಲಹಂಕ
*ಕಪ್ಪುಹಣ ಏಕೆ ಬೆಳಕಿಗೆ ಬರುವುದಿಲ್ಲ?*
ಅದು ಬೆಳಕಿಗೆ ಬಂದರೆ ಅದನ್ನು ಇಟ್ಟುಕೊಂಡವರು ಕತ್ತಲೆ ಕೋಣೆಗೆ ಹೋಗಬೇಕಾಗುವುದರಿಂದ!

■ ರಾಮ್